**ಮದ್ಯದ ಅಂಗಡಿಗಳ ಸಂಖ್ಯೆ ಹಾಗೂ ಅವುಗಳ ಪರವಾನಗಿ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 115 (438)
ಸದಸ್ಯರ ಹೆಸರು : ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ)
ಉತ್ತರಿಸುವ ಸಚಿವರು : ಶ್ರೀ ರೇಣುಕಾಚಾರ್ಯ
(ಮಾನ್ಯ ಅಬಕಾರಿ ಸಚಿವರು)

**ಪ್ರಶ್ನೆಗಳು:**

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಮದ್ಯದ ಅಂಗಡಿಗಳ ಸಂಖ್ಯೆ ಎಷ್ಟು, ಯಾವ ಯಾವ ಅಂಗಡಿಗಳಿಗೆ ಪರವಾನಗಿ ನೀಡಲಾಗಿದೆ; ಪರವಾನಗಿ ಪಡೆಯದೇ ಇರುವಂತಹ ಅಂಗಡಿಗಳು ಯಾವುವು? (ವಿವರ ಒದಗಿಸುವುದು);

**ಉತ್ತರಗಳು:**

ಅ) ಚಿಕ್ಕಬಳ್ಳಪುರ ಜಿಲ್ಲೆಯಲ್ಲಿ 2011–12ನೇ ಸಾಲಿಗೆ 147 ವಿವಿಧ ಮಾದರಿಯ ಸನ್ನದುಗಳನ್ನು ನವೀಕರಿಸಲಾಗಿದೆ. ಸದರಿ ಸನ್ನದುಗಳಿಗೆ ಕೆಳಕಂಡಂತೆ ಪರವಾನಿಗೆ ನೀಡಲಾಗಿರುತ್ತದೆ.

| ಕ್ರ. ಸಂ. | ಸನ್ನದು | ಸನ್ನದು ಸಂಖ್ಯೆ |
|---|---|---|
| 1. | ಸಿಎಲ್–2 (ಚಿಲ್ಲರೆ ಮದ್ಯ ಮಾರಾಟ ಮಳಿಗೆ) | 69 |
| 2. | ಸಿಎಲ್–4 (ಕ್ಲಬ್ ಸನ್ನದು) | 01 |
| 3. | ಸಿಎಲ್–7 (ಹೊಟೇಲ್ ಸನ್ನದು) | 01 |
| 4. | ಸಿಎಲ್–9 (ಬಾರ್ ಮತ್ತು ರೆಸ್ಟೋರೆಂಟ್) | 68 |
| 5. | ಸಿಎಲ್–11ಸಿ (ಎಂ.ಎಸ್.ಐ.ಎಲ್) | 07 |
| 6. | ಸಿಎಲ್–14 (ಪ್ರವಾಸೋದ್ಯಮ ಸನ್ನದು) | 01 |
| | ಒಟ್ಟು | **147** |

ಶ್ರೀ ಎಂ.ಪ್ರಕಾಶ್, ಇವರು ಚಿಕ್ಕಬಳ್ಳಾಪುರ ಟೌನ್, ಇಲ್ಲಿ 2010–11ನೇ ಸಾಲಿನಲ್ಲಿ ಸಿಎಲ್–9 ಸನ್ನದನ್ನು ಪರವಾನಿಗೆ ಪಡೆದಿದ್ದು, ಸದರಿ ಸನ್ನದು ನವೀಕರಣಕ್ಕೆ ಸಂಬಂಧಿಸಿದ ಪ್ರಕರಣವು

ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವುದರಿಂದ ಸದರಿ ಸನ್ನದನ್ನು 2011–12ನೇ ಸಾಲಿಗೆ ನವೀಕರಿಸಿರುವುದಿಲ್ಲ.
ಪರವಾನಗಿ ಪಡೆಯದೇ ಇರುವಂತಹ ಅಂಗಡಿಗಳು ಯಾವುದೂ ಇರುವುದಿಲ್ಲ.

## ಪಿ.ಎಂ.ಜಿ.ಎಸ್.ವೈ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 116 (439)
ಸದಸ್ಯರ ಹೆಸರು : ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ)
ಉತ್ತರಿಸುವ ಸಚಿವರು : ಶ್ರೀ ಜಗದೀಶ್ ಶೆಟ್ಟರ್
(ಗ್ರಾಮೀಣಾಭಿವೃದ್ಧಿ ಸಚಿವರು)

**ಪ್ರಶ್ನೆಗಳು:**

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಪಿ.ಎಂ.ಜಿ.ಎಸ್.ವೈ. ಯೋಜನೆಯಡಿ ಕಳೆದ ಮೂರು ವರ್ಷಗಳಿಂದ ರಸ್ತೆಗಳಿಗಾಗಿ ನೀಡಿರುವ ಹಣ ಎಷ್ಟು? ಯಾವ ಯಾವ ರಸ್ತೆಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದಕ್ಕೆ ತಗುಲಿರುವ ಅನುದಾನ ಎಷ್ಟು? (ಸಂಪೂರ್ಣ ವಿವರ ಒದಗಿಸುವುದು)

**ಉತ್ತರಗಳು:**

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪಿ.ಎಂ.ಜಿ.ಎಸ್.ವೈ.ಯಡಿ ಕೈಗೊಂಡಿರುವ ಕಾಮಗಾರಿಗಳು, ನೀಡಿರುವ ಅನುದಾನ ಹಾಗೂ ವರ್ಷವಾರು ವೆಚ್ಚದ ವಿವರವು ಕೆಳಗಿನಂತಿದೆ.

| ಕ್ರ ಸಂ. | ಪ್ಯಾಕೇಜು ಸಂಖ್ಯೆ | ಕೈಗೆತಿತಕೊಳ್ಳಲಾದ ಕಾಮಗಾರಿ ಹೆಸರು | ನೀಡಿರುವ ಒಟ್ಟು ಅನುದಾನ | ವರ್ಷವಾರು ತಗುಲಿರುವ ವೆಚ್ಚ | | |
|---|---|---|---|---|---|---|
| | | | | 2008–2009 | 2009–2010 | 2011 |
| 1. | KN-19-25A | T07-Giriyapalli | 57.95 | 57.95 | 0.00 | 0.00 |
| 2. | KN-19-25B | BD road, Saddaiayarapalli | 5.77 | 5.77 | 0.00 | 0.00 |
| 3. | KN-19-60 | Nallapparaddipalli T-06 | 173.68 | 114.04 | 59.64 | 0.00 |
| 4. | KN-19-61 | Boovipalli T-05 | 42.31 | 32.04 | 10.27 | 0.00 |